7. 2002–03ನೇ ಸಾಲಿನಲ್ಲಿ ಕಳಪೆ ಮಟ್ಟದ ಇಂಜೆಕ್ಷನ್ ಪೈಪ್ ಲೈನ್ ಅಳವಡಿಸಿ ರೂ. 7.26 ಲಕ್ಷ ಖರ್ಚು ಮಾಡಿರುವುದು.

ಆ) ಮೇಲೆ ಶೇಕಡ 7 ಪ್ರಕರಣಗಳಲ್ಲಿ ಆರೋಪಗಳು ಸಾಬೀತಾಗಿರುತ್ತದೆ.

ಇ) ವಿಚಾರಣಾ ವರದಿಯನುಸಾರ ಸಾಬೀತಾಗಿರುವ ಆರೋಪಗಳನ್ನು ಸರಿಪಡಿಸಿ ಅನುಪಾಲನಾ ವರದಿ ಸಲ್ಲಿಸಲು ಕರ್ನಾಟಕ ಸಹಕಾರ ಸಂಘಗಳ ಕಾಯ್ದೆ 1969ರ ಕಲಂ 68ರಡಿ ಆಯುಕ್ತರು ಕಬ್ಬು ಅಭಿವೃದ್ಧಿ ಹಾಗೂ ಸಕ್ಕರೆ ನಿರ್ದೇಶಕರು ಬೆಂಗಳೂರುವರು ದಿನಾಂಕ 7–12–2004ರನ್ವಯ ಕಾರ್ಖಾನೆಗೆ ನಿರ್ದೇಶನ ನೀಡಲಾಗಿರುತ್ತದೆ.

ಕರ್ನಾಟಕ ಸಹಕಾರ ಸಂಘಗಳ ಕಾಯ್ದೆ 1959ರ ಕಲಂ 30ರಡಿ ಆಡಳಿತ ಮಂಡಳಿ ರದ್ದುಪಡಿಸಿ ಆಡಳಿತಾಧಿಕಾರಿಯನ್ನು ಏಕೆ ನೇಮಿಸಬಾರದು ಎಂಬುದಕ್ಕೆ ಕಾರಣ ಕೇಳುವ ನೋಟೀಸನ್ನು ದಿನಾಂಕ 7–12–2004ರಲ್ಲಿ ಆಡಳಿತ ಮಂಡಳಿ ಸದಸ್ಯರುಗಳಿಗೆ ನೋಟೀಸು ಜಾರಿ ಮಾಡಿದರು. ಇವರ ಮಧ್ಯೆ ಗೌರವ ಕರ್ನಾಟಕ ಉಚ್ಚ ನ್ಯಾಯಾಲಯವು ರಿಟ್ ಅರ್ಜಿ ಸಂ. ಡಬ್ಲ್ಯೂಪಿ 36263 2004 ಸಿಎಸ್ ದಿನಾಂಕ 10–11–2004ರ ಆದೇಶದಂತೆ ಕಾರ್ಖಾನೆಯ ಆಡಳಿತ ಮಂಡಳಿಗೆ 2004–05 ರಿಂದ 2008–09ನೇ ಸಾಲುಗಳಿಗೆ ದಿನಾಂಕ 23–12–2004ರಂದು ಚುನಾವಣೆ ಜರುಗಿರುತ್ತದೆ. ಹೊಸ ಆಡಳಿತ ಮಂಡಳಿ ಅಸ್ತಿತ್ವದಲ್ಲಿರುತ್ತದೆ.

609(974) ಶ್ರೀ ಎಸ್.ಎ. ರವೀಂದ್ರನಾಥ್ (ಮಾಯಕೊಂಡ) ಮಾನ್ಯ ಸಹಕಾರ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ಭದ್ರಾ ಸಹಕಾರಿ ಸಕ್ಕರೆ ಕಾರ್ಖಾನೆ (ನಿ), ದೊಡ್ಡಬಾತಿ ಇದರ ಆಡಳಿತ ಮಂಡಳಿಗೆ ದಿನಾಂಕ 23–2–2004ರಂದು ಚುನಾವಣೆ ನಿಗದಿಗೊಳಿಸಿ, ಮತದಾನದ ದಿನಾಂಕದ ಬಗ್ಗೆ ಎಲ್ಲಾ ಮತದಾರರಿಗೆ ತಿಳಿಯುವ ಹಾಗೆ ವೈಯಕ್ತಿಕ ನೋಟೀಸ್‌ಗಳನ್ನು ಕಳುಹಿಸದೆ ಚುನಾವಣೆ ನಡೆಸಿರುವುದು ನಿಜವೇ;

ಆ) ಹಾಗಿದ್ದಲ್ಲಿ, ಇದು ಬಹುತೇಕ ಮತದಾರರ ಸದಸ್ಯರಿಗೆ ಮತದಾನದ ಹಕ್ಕಿನಿಂದ ವಂಚಿತರನ್ನಾಗಿ ಮಾಡಿದಂತಾಗಿರುವುದಲ್ಲದೆ ಮತ್ತು ಸಹಕಾರ ನೀತಿ ಹಾಗೂ ತತ್ವಗಳಿಗೆ ವಿರುದ್ಧವಾಗಿರುವುದಲ್ಲವೇ;

ಇ) ಹೌದಾದಲ್ಲಿ ದಿನಾಂಕ 23–1–2004ರಂದು ನಡೆದಿರುವ ಚುನಾವಣೆಯನ್ನು ಸರ್ಕಾರ ಅಸಿಂಧು ಎಂದು ಸಾರುವುದೇ?

ಶ್ರೀ ಆರ್.ವಿ. ದೇಶಪಾಂಡೆ( ಸಹಕಾರ ಸಚಿವರು)

ಅ) ಕಾರ್ಖಾನೆಯ 2004–05 ರಿಂದ 2008–09 ಸಾಲಿನ ಅವಧಿಯ ಆಡಳಿತ ಮಂಡಳಿ ಚುನಾವಣೆಯು ದಿನಾಂಕ 10–9–2004. ರಂದು ಈ ಹಿಂದೆ ನಿಗದಿಯಾಗಿತ್ತು. ಅದರನುಸಾರ ಚುನಾವಣೆ ಸಂಬಂಧಿಸಿದಂತೆ ಕಾರ್ಖಾನೆಯು

ಎಲ್ಲಾ ಸದಸ್ಯರುಗಳಿಗೆ ವೈಯಕ್ತಿಕವಾಗಿ ನೋಟೀಸ್ ಕಳುಹಿಸಿತ್ತು. ಸರ್ಕಾರವು ಆದೇಶ ಕ್ರಮಾಂಕ ಸಿಎಂಡಬ್ಲ್ಯೂ 37 ಸಿಎಲ್‌ಎಂ 2004 (ಪಿ) ದಿನಾಂಕ 1-9. 2004ರ ಆದೇಶದನ್ವಯ ದಿನಾಂಕ 30-9-2004ರೊಳಗೆ ಜರುಗಬೇಕಾದ ಸಹಕಾರ ಸಂಘಗಳ ಆಡಳಿತ ಮಂಡಳಿ ಚುನಾವಣೆಗಳನ್ನು (ಹಾಲು ಉತ್ಪಾದಕ ಕ್ಷೇತ್ರದ ಸಂಘಗಳನ್ನು ಹೊರತುಪಡಿಸಿ) ಮುಂದೂಡಿ ದಿನಾಂಕ 31-3-2005ರ ಒಳಗಾಗಿ ಚುನಾವಣೆ ನಡೆಸಲು ಆದೇಶಿಸಿರುವುದರಿಂದ ದಿನಾಂಕ 10-9-2004 ರಂದು ಜರುಗಬೇಕಾಗಿದ್ದ ಚುನಾವಣೆಯ ಪ್ರಕ್ರಿಯೆ ಮುಂದುವರೆಸದೆ ಚುನಾವಣಾಧಿಕಾರಿಗಳು ರದ್ದುಪಡಿಸಿದ್ದರು. ತದನಂತರ ಗೌರವ ಕರ್ನಾಟಕ ಉಚ್ಚ ನ್ಯಾಯಾಲಯವು ರಿಟ್ ಅರ್ಜಿ ಸಂಖ್ಯೆ: 36273/2004 ಸಿಎಸ್ ದಿನಾಂಕ 10-10-2004ರಲ್ಲಿ ಈ ಹಿಂದೆ ಪ್ರಕಟವಾಗಿದ್ದ ಚುನಾವಣೆ ಪ್ರಕ್ರಿಯೆಯಾದ ಹಂತದಲ್ಲಿ ನಿಲ್ಲಿಸಲಾಗಿತ್ತೋ ಆ ಹಂತದಿಂದ ಮುಂದುವರೆಸಲು ಆದೇಶವಾಗಿದ್ದು, ಅದರನುಸಾರ ದಿನಾಂಕ 23-2-2004ರಂದು ಚುನಾವಣೇ ನಡೆದು ಚುನಾವಣೆ ಪ್ರಕ್ರಿಯೆಯನ್ನು ಚುನಾವಣಾಧಿಕಾರಿಗಳು ಪೂರ್ಣಗೊಳಿಸಿ ಆಯ್ಕೆಯಾಗಿರುವ ಆಡಳಿತ ಮಂಡಳಿ ಸದಸ್ಯರುಗಳ ಪಟ್ಟಿಯನ್ನು ಪ್ರಕಟಣೆ ಮಾಡಿರುತ್ತಾರೆ. ಈ ಚುನಾವಣೆ ಪ್ರಕ್ರಿಯೆ ಮುಂದುವರೆಸಿರುವ ಬಗ್ಗೆ ಕಾರ್ಖಾನೆಯು ದಿನಾಂಕ 14-2-2004ರಂದು ಪ್ರಕಟಣೆ ಮಾಡಿ ಈ ಪ್ರಕಟಣೆಯನ್ನು ಸ್ಥಳೀಯ ಹಾಗೂ ರಾಜ್ಯ ಮಟ್ಟದ ಪತ್ರಿಕೆಗಳ ಮೂಲಕ ಪತ್ರಿಕಾ ಪ್ರಕಟಣೆಯನ್ನು ನೀಡುವ ಮೂಲಕ ಎಲ್ಲಾ ಮತದಾರರ ಸದಸ್ಯರುಗಳ ಹಾಗೂ ಅಭ್ಯರ್ಥಿಗಳ ಗಮನಕ್ಕೆ ಕಾರ್ಖಾನೆಯು ತಂದಿರುತ್ತದೆ.

ಆ) ಮುಂದುವರೆಸಿರುವ ಚುನಾವಣೆ ಪ್ರಕ್ರಿಯೆಯ ಬಗ್ಗೆ ದಿನಾಂಕ 14-2-2004ರಂದು ನೀಡಲಾಗಿರುವ ಪ್ರಕಟಣೆಯನ್ನು ಸ್ಥಳೀಯ ಹಾಗೂ ರಾಜ್ಯಮಟ್ಟದ ಪತ್ರಿಕೆಗಳ ಮೂಲಕ ಎಲ್ಲಾ ಮತದಾರ ಸದಸ್ಯರುಗಳ ಹಾಗೂ ಅಭ್ಯರ್ಥಿಗಳ ಗಮನಕ್ಕೆ ತಂದಿರುವುದರಿಂದ ಹಾಗೂ ಮತದಾನದ ದಿನಾಂಕದಂದು ಮತದಾರ ಸದಸ್ಯರು ಬಂದು ಮತ ಚಲಾಯಿಸಿ ನಿಯಮಾನುಸಾರ ಆಡಳಿತ ಮಂಡಳಿಗೆ ಸದಸ್ಯರನ್ನು ಆಯ್ಕೆ ಮಾಡಿ ಚುನಾವಣಾಧಿಕಾರಿಗಳು ಪ್ರಕಟಣೆ ಹೊರಡಿಸಿರುವುದಿಂದ ಇದು ನಿಯಮ ಬದ್ಧವಾಗಿರುತ್ತದೆ.

ಇ) ಉದ್ಭವಿಸುವುದಿಲ್ಲ.

610(1105) ಶ್ರೀ ರೇಣುಕಾಚಾರ್ಯ ಎಂ.ಪಿ. (ಹೊನ್ನಾಳಿ) ಮಾನ್ಯ ಕೃಷಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ಹೊನ್ನಾಳಿ ತಾಲ್ಲೂಕಿನಲ್ಲಿ ರೈತರಿಗೆ ಬಿಡುಗಡೆ ಮಾಡಿರುವ ಬೆಳೆ ವಿಮೆ ಹಣ ಎಷ್ಟು;

ಆ) ಹೊನ್ನಾಳಿ ತಾಲ್ಲೂಕಿನ ಬೆಳಗುತ್ತಿ ಹೋಬಳಿಯಲ್ಲಿ ಬೆಳೆ ವಿಮೆ ಪಾವತಿಸಿರುವ ರೈತರ ಸಂಖ್ಯೆ ಎಷ್ಟು;